# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 88 (542) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಪಿ. ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾಗಿದ ದಿನಾಂಕ | : | 14/08/2025 |
| ಉತ್ತರಿಸುವ ಸಚಿವರು | : | ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| 1. | ಬಾಗಲಕೋಟೆ ನಗರಕ್ಕೆ ಕೇವಲ 1 ಕಿ.ಮೀ ಅಂತರದಲ್ಲಿ ಪುರಾತನ ಪ್ರಸಿದ್ಧವಾದ ಗುಡ್ಡದ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನಕ್ಕೆ ನಿತ್ಯ ಸಹಸ್ರಾರು ಪ್ರವಾಸಿಗರು, ಭಕ್ತರು ಹೋಗಿ ಬರುತ್ತಿದ್ದು, ಅದು ಮಲ್ಲಾಪುರ ಗ್ರಾಮ ವ್ಯಾಪ್ತಿಯಲ್ಲಿ ಬರುತ್ತಿದ್ದು, ದೇವಸ್ಥಾನ ಹೊರತುಪಡಿಸಿ ಗ್ರಾಮದ ಸಹಸ್ರಾರು ಎಕರೆ ಜಮೀನುಗಳು ಮತ್ತು ಸಂಪೂರ್ಣ ಗ್ರಾಮವು ಕೂಡ ಆಲಮಟ್ಟಿ ಜಲಾಶಯದಲ್ಲಿ 20 ವರ್ಷಗಳ ಹಿಂದೆ ಮುಳುಗಡೆ ಆಗಿರುವುದು ಸರ್ಕಾರಕ್ಕೆ ತಿಳಿದ ವಿಷಯವಲ್ಲವೇ; | ಹೌದು.<br><br>ದಿನಾಂಕ:26.07.2025ರ ಪತ್ರದಲ್ಲಿ ಬಾಗಲಕೋಟ ಯುನಿಯನ್ ಆಫ್ ಮರ್ಚಂಟ್ಸ್ ಆಂಡ್ ಎಂಟರಪ್ರೆನರ್ಸ್ ಅಸೋಸಿಯೇಷನ್ (ರಿ) ಬಾಗಲಕೋಟ ಇವರು ಬಾಗಲಕೋಟೆ ತಾಲ್ಲೂಕಿನ ಗುಡ್ಡದ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನಕ್ಕೆ ಸೇತುವೆ ನಿರ್ಮಾಣ ಮಾಡಿ ಸುಗಮ ಪ್ರವೇಶದ ವ್ಯವಸ್ಥೆ ಕಲ್ಪಿಸುವುದು, ಸ್ಥಳದಲ್ಲಿ ಉದ್ಯಾನವನ, ವೀಕ್ಷಣಾ ಗೋಪುರ ಹಾಗೂ ಶಿವನ ಮಹಾಮೂರ್ತಿ ಸ್ಥಾಪನೆ, ಹಿನ್ನೀರಿನಲ್ಲಿ ಜಲಸಾಹಸ ಚಟುವಟಿಕೆಗಳು – ಕಯಾಕಿಂಗ್, ಜೆಟ್ ಸ್ಕೀ, ಬೋಟಿಂಗ್, ವಿಹಾರ ಇತ್ಯಾದಿಗಳನ್ನು ಪ್ರಾರಂಭಿಸುವುದು, ಮಲ್ಲಯ್ಯನ ಗುಡ್ಡದಿಂದ ಹೆರಕಲ್ ಅಣೆಕಟ್ಟೆವರೆಗೆ ಬೋಟಿಂಗ್ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗಳಿಗೆ ಅನುಮೋದನೆ ನೀಡಿ ಅನುದಾನ ಬಿಡುಗಡೆ ಮಾಡುವಂತೆ ಮನವಿ ಸ್ವೀಕೃತವಾಗಿರುತ್ತದೆ.<br><br>ಆದರೆ, ಸದರಿ ದೇವಸ್ಥಾನವು ಶ್ರೀ ಮಲ್ಲಿಕಾರ್ಜುನ ಜೀರ್ಣೋದ್ಧಾರ ಸಮಿತಿ ಬಾಗಲಕೋಟೆ ರವರ ಒಡೆತನದಲ್ಲಿದ್ದು, ಈ ದೇವಸ್ಥಾನವು ಬಾಗಲಕೋಟೆ ತಾಲ್ಲೂಕಿನ ಮಲ್ಲಾಪುರ ಎಂಬ ಗ್ರಾಮದ ವ್ಯಾಪ್ತಿಯಲ್ಲಿದ್ದು, ಆಲಮಟ್ಟಿ ಹಿನ್ನೀರಿನಲ್ಲಿ ಸದರಿ ಗ್ರಾಮವು ಮುಳುಗಡೆಯಾದ ಪ್ರಯುಕ್ತ ಗುಡ್ಡದ ಮೇಲಿರುವ ಮಲ್ಲಿಕಾರ್ಜುನ ದೇವಸ್ಥಾನ ಹೊರತುಪಡಿಸಿ ಇಡೀ ಗ್ರಾಮವನ್ನು ಬೇರೆಡೆಗೆ ಸ್ಥಳಾಂತರಿಸಿರುವುದು ತಿಳಿದುಬಂದಿರುತ್ತದೆ.<br><br>ಈ ದೇವಸ್ಥಾನವು ಕೃಷ್ಣ ನದಿ ತಟದಲ್ಲಿದ್ದು, ಸುತ್ತಮುತ್ತಲಿನ ಪ್ರದೇಶವು ಪರಿಭಾವಿತ ಅರಣ್ಯ ಪ್ರದೇಶವಾಗಿರುತ್ತದೆ (Deemed Forest). ಈ ಪ್ರದೇಶವು ಅರಣ್ಯ ಇಲಾಖೆ ಹಾಗೂ ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ, ಇಲಾಖೆಗಳ ವ್ಯಾಪ್ತಿಯಡಿಯಲ್ಲಿ ಬರುವುದರಿಂದ ಹಾಗೂ ಗುಡ್ಡದ ಮೇಲಿರುವ ಮಲ್ಲಿಕಾರ್ಜುನ ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶವು ಆಲಮಟ್ಟಿ ಹಿನ್ನೀರಿನಲ್ಲಿ ಮುಳಗಡೆಯಾಗಿರುವುದರಿಂದ ಕೃಷ್ಣಾ ಮೇಲ್ದಂಡೆ ಯೋಜನೆ, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಇಲಾಖೆಯಿಂದ ಸುತ್ತಮುತ್ತಲಿನ ಪ್ರದೇಶದಲ್ಲಿರುವ ಗ್ರಾಮಗಳನ್ನು ಸ್ಥಳಾಂತರಿಸಲಾಗಿರುತ್ತದೆ. |
| 2. | ಈ ದೇವಸ್ಥಾನವು ಎತ್ತರದ ಸುಂದರ ಪರಿಸರ ಪ್ರದೇಶದಲ್ಲಿದ್ದು, ಘಟಪ್ರಭಾ ನದಿಯ ದಡದಲ್ಲಿದ್ದು ಕಾರಣ, ಕಳೆದ 20 ವರ್ಷಗಳ ಅಲ್ಲಿ ಹೋಗಿ ಬರುತ್ತಿದ್ದು ಪ್ರವಾಸಿಗರು ಹೋಗಿ ಬರಲು ರಸ್ತೆ ಯಾವ ಆಲಮಟ್ಟಿ ಹಿನ್ನಿರಿನಲ್ಲಿ ರಸ್ತೆ ಮುಳುಗಡೆಯಾದ ಕಾರಣ ಅನಿವಾರ್ಯವಾಗಿ ಸಿಗಂಧೂರು ಚೌಡೇಶ್ವರಿ ದೇವಸ್ಥಾನಕ್ಕೆ ಹೋಗಿ ಬರುವ ರೀತಿ 15-20 ಕಿ.ಮೀ ಹಿನ್ನೀರು ಸುತ್ತು ಬಳಸಿ ಜನರು ತೊಂದರೆ ಅನುಭವಿಸುತ್ತಿರುವ ಮಾಹಿತಿ ಸರ್ಕಾರಕ್ಕೆ ಬಂದಿದೆಯೇ; | |
| 3. | ಈ ಎಲ್ಲ ಕಾರಣಗಳಿಂದ ಅಲ್ಲಿಗೆ ವಾಹನಗಳ ಮೂಲಕ ಹೋಗಿ ಬರಲು ಹಿನ್ನೀರಿಗೆ ಒಂದು ಸೇತುವೆ ನಿರ್ಮಾಣ, ಪ್ರವಾಸಿ ಭಕ್ತರ ಅನುಕೂಲಕ್ಕಾಗಿ ಸರ್ಕಾರಿ ವಸತಿ ಗೃಹ, ಉದ್ಯಾನವನ, ನದಿಗೆ ಇಳಿಯಲು ರಸ್ತೆ, ಪಾವಟಿಗೆಗಳ ವ್ಯವಸ್ಥೆ, ಬೋಟಿಂಗ್ ವ್ಯವಸ್ಥೆ, ಹೀಗೆ ಹಲವಾರು ರೀತಿಯಿಂದ ಆ ಇಡೀ ಕ್ಷೇತ್ರವನ್ನು ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿ ಪಡಿಸಲು ಕಳೆದ 20 ವರ್ಷಗಳಿಂದ ಭಕ್ತರು, ಪ್ರವಾಸಿಗರು ಬೇಡಿಕೆ ಇಟ್ಟಿರುವುದು ನಿಜವಲ್ಲವೇ; | |
| 4. | ಹಾಗಿದ್ದಲ್ಲಿ, ಈ ಕುರಿತಂತೆ ಇದನ್ನು ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ದಿಶೆಯಲ್ಲಿ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು? (ವಿವರ ನೀಡುವುದು) | |

2.....

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | | ಆದ್ದರಿಂದ, ಸದರಿ ದೇವಸ್ಥಾನದ ಬಳಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಸಭೆಯನ್ನು ಆಯೋಜಿಸಿ ಸದರಿ ಸಭೆಗೆ ಶ್ರೀ ಪಿ.ಹೆಚ್.ಪೂಜಾರ್, ಮಾನ್ಯ ವಿಧಾನ ಪರಿಷತ್ ಸದಸ್ಯರನ್ನೊಳಗೊಂಡಂತೆ ಸ್ಥಳೀಯ ಜನ ಪ್ರತಿನಿಧಿಗಳು ಹಾಗೂ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಈ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಸವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಿ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಅಗತ್ಯವಿರುವ ನಿರಕ್ಷೇಪಣಾ ಪತ್ರಗಳೊಂದಿಗೆ ಸಲ್ಲಿಸಲು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗುವುದು. ಸದರಿ ವರದಿಗಳು ಸ್ವೀಕೃತವಾದ ನಂತರ ಕ್ರಮವಹಿಸಲಾಗುವುದು.<br><br>ಇದಲ್ಲದೇ, ಪ್ರಸ್ತುತ ಭಾರತ ಸರ್ಕಾರದ ಬಂದರುಗಳು, ಹಡಗು ಮತ್ತು ಜಲಮಾರ್ಗಗಳ ಸಚಿವಾಲಯದ ಅಧೀನದಲ್ಲಿರುವ Inland Waterways Authority of India (IWAI) ಪ್ರಾಧಿಕಾರವು ರಿವರ್ ಕ್ರೂಸ್ ಪ್ರವಾಸೋದ್ಯಮದ (River Cruise Tourism) ಅಭಿವೃದ್ಧಿಗಾಗಿ "River Cruise in India) ಎಂಬ ವರದಿಯನ್ನು ಸಿದ್ಧಪಡಿಸಿರುತ್ತದೆ. ಈ ವರದಿಯಲ್ಲಿ ಕರ್ನಾಟಕದಲ್ಲಿ 12 ಸಂಭಾವ್ಯ ರಾಷ್ಟ್ರೀಯ ಜಲಮಾರ್ಗಗಳನ್ನು (National Waterways) ಗುರುತಿಸಲಾಗಿದೆ. ಅದರಲ್ಲಿ, ವಿಜಯಪುರ ಮತ್ತು ಬಾಗಲಕೋಟೆ ಅವಳಿ ಜಿಲ್ಲೆಗಳಿಗೆ ಹೊಂದಿಕೊಂಡಿರುವ ಕೃಷ್ಣಾ ನದಿಯು ಕೂಡ ಒಂದಾಗಿರುತ್ತದೆ.<br><br>ವಿಜಯಪುರ ಮತ್ತು ಬಾಗಲಕೋಟೆ ಅವಳಿ ಜಿಲ್ಲೆಗಳಿಗೆ ಹೊಂದಿಕೊಂಡಿರುವ ಕೃಷ್ಣಾ ನದಿ ತೀರದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುವ ದೃಷ್ಟಿಯಿಂದ ಕ್ರೂಸ್ ಟೂರಿಸಂ ಅನ್ನು ಕೈಗೊಳ್ಳಲು ಆಲಮಟ್ಟಿ ಮತ್ತು ಹೆರಕಲ್ ನಡುವಿನ ಒಟ್ಟು 112 ಕಿಲೋಮೀಟರ್ ಕ್ರೂಸ್ ಸಂಚರಿಸುವ ಮಾರ್ಗದಲ್ಲಿ ಅಂದಾಜು ವೆಚ್ಚ ರೂ.16.95 ಕೋಟಿಗಳಲ್ಲಿ ಎರಡು ಕಾಂಕ್ರೀಟ್ ಫ್ಲೋಟಿಂಗ್ ಜೆಟ್ಟಿಗಳನ್ನು ಹಾಗೂ ಯಾದಗಿರಿ ಜಿಲ್ಲೆಯ ನಾರಾಯಣಸಾಗರ ಅಣೆಕಟ್ಟಿನ ಹತ್ತಿರ ಒಂದು ಕಾಂಕ್ರೀಟ್ ಫ್ಲೋಟಿಂಗ್ ಜೆಟ್ಟಿಯನ್ನು ನಿರ್ಮಿಸಲು ಹಾಗೂ ಸದರಿ ಸ್ಥಳಗಳಲ್ಲಿ Land side facilities ಗಳನ್ನು ಕೈಗೊಳ್ಳಲು ಯೋಜನೆಗಳನ್ನು ರೂಪಿಸಲಾಗಿದೆ. |

(ಎಚ್.ಕೆ.ಪಾಟೀಲ)
ಕಾನೂನು ನ್ಯಾಯ, ಮಾನವ ಹಕ್ಕುಗಳು, ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು